ಪಿಡಬ್ಲ್ಯೂಃ 1

ಇಂದು ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಡಿ ಟಿ ಟಿ ವಕೀಲರಿಂದಃ

ದಾವಾ ಆಸ್ತಿಯನ್ನು ಹೊರತುಪಡಿಸಿ ಉಳಿದ ನಮ್ಮ ಪಿತ್ರಾರ್ಜಿತ ಆಸ್ತಿಗಳನ್ನು 1981 ರಲ್ಲಿ ನಾವು ವಿಬಾಗ ಮಾಡಿಕೊಂಡು ದಾವಾ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಆಗಿದ್ದ ಕಾರಣದಿಂದ ಅವರು ದಾವಾ ಆಸ್ತಿಯನ್ನು ಪ್ರತಿವಾದಿ 2 ರಿಂದ 5 ನೇದವರಿಗೆ ಮೃತ್ಯು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಆ ರೀತಿ ನನ್ನ ತಂದೆ ಮೃತ್ಯು ಪತ್ರವನ್ನು ಮಾಡಿಕೊಡುವಾಗ ನನ್ನನಾಗಲೀ ಅಥವಾ ನನ್ನ ಅಣ್ಣನಾಗಲೀ ಕೇಳಿ ಮಾಡಿಕೊಟ್ಟಿರುವುದಿಲ್ಲ ಹಾಗೂ ನಮ್ಮ ಸಹಿಗಳನ್ನು ಕೂಡ ಪಡೆದುಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ಕ್ರಮ ಸಂಖ್ಯೆ3 ದಾವಾ ಶೆಡ್ಯೂಲ್ ಆಸ್ತಿ ಅಡಿವೆಪ್ಪನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

2. ನಾನು ಮದುವೆಯಾಗುವ ಪೂರ್ವದಿಂದಲೂ ಹಾನಗಲ್ ತಾಲೂಕಿನ ಕೆಲವರಕೊಪ್ಪ ಗ್ರಾಮದಲ್ಲಿ ವಾಸವಾಗಿದ್ದೆ ಎಂದರೆ ಸರಿ. ಅದೇ ರೀತಿ ನನ್ನ ಅಣ್ಣ ಹನಮಂತಪ್ಪ ರವರು ಬೇರೆ ಊರಿನಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಹೆಂಡತಿ ಮನೆಯಲ್ಲಿ ವಾಸಕ್ಕೆ ಹೋಗಿದ್ದರು ನಂತರ ಬಂದು ಡಮ್ಮಳ್ಳಿ ಗ್ರಾಮದಲ್ಲಿಯೇ ವಾಸವಾಗಿರುತ್ತಾರೆ ಎಂದು ನುಡಿದಿರುತ್ತಾರೆ. ನಾನಾಗಲೀ ನನ್ನ ಅಣ್ಣ ಹನುಮಂತಪ್ಪ ರವರಾಗಲೀ ಡಮ್ಮಳ್ಳಿ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಬರಗಾಲ ಎಂದು ಊರು ಬಿಟ್ಟು ಹೋಗಿ ದುಡಿದುಕೊಂಡು ಬಂದು ಈಗ ನಾನು ಡಮ್ಮಳ್ಳಿ ಗ್ರಾಮದಲ್ಲಿಯೇ ವಾಸವಾಗಿರುತ್ತೇವೆ ಎಂದು ನುಡಿದಿರುತ್ತಾರೆ. ನಾನು ಮತ್ತು ನನ್ನ ಅಣ್ಣ ಹನಮಂತಪ್ಪ ರರವರು ನನ್ನ ತಂದೆಯ ಪಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರದ ಮೂಲಕ ಪ್ರತಿವಾದಿ 2 ರಿಂದ 5 ರವರ ಹೆಸರನ್ನು ಕಂದಾಯ ದಾಖಲೆಗಳಲ್ಲಿ ಹೆಸರನ್ನು ನಮೂದಿಸಲು ಅರ್ಜಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಅರ್ಜಿಯಂತೆ ಕಂದಾಯ ಅಧಿಕಾರಿಗಳು ಡ.ನಂ.1484 ರಂತೆ ಮಂಜೂರು ಮಾಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

3. 1981 ರಲ್ಲಿ ವಿಬಾಗದಂತೆ ಹನಮಂತಪ್ಪರವರಿಗೆ ಬಂದಂತಹ ಆಸ್ತಿಯು ಅವರ ಹೆಸರಿನಲ್ಲಿಯೇ ಇದಿದ್ದು ನಂತರ 2024 ರಲ್ಲಿ ಪ್ರತಿವಾದಿ 6 ರಿಂದ 10 ರವರ ಹೆಸರುಗಳನ್ನು ಕಂದಾಯ ದಾಖಲೆಗಳಲ್ಲಿ ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಹಿರೇಕೆರೂರು.